ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಸ್ಮಶಾನದಲ್ಲಿ ಜಾಗ ಕಾದಿರಿಸುವ ಕಾಲ ಯಾವಾಗ ಬರುತ್ತೆ?*




ಏರುತ್ತಿರುವ ನರ್ಸಿಂಗ್ ಹೋಂ ಬಿಲ್ಲನ್ನು ಇನ್ನು ಕಟ್ಟಲು ಸಾಧ್ಯವೇ ಇಲ್ಲ ಎಂದಾಗ.

ಮಹಾವೀರ ಕಾಸರ, ಶಿವಮೊಗ್ಗ
*ನಿಶ್ಚಿತಾರ್ಥ ಮತ್ತು ಮದುವೆಯ ನಡುವಿನ ಅವಧಿಯನ್ನು ಏನೆಂದು ಕರೆಯಬೇಕು?*
ಗಂಡು ಹೆಣ್ಣನ್ನು ಸಂತೋಷಪಡಿಸಲು ಬಯಸುವ ಏಕೈಕ ಕಾಲವಾದ್ದರಿಂದ ವಧುಮಾಸ.

ಆರತಿ ಘಟಿಕಾರ್, ದುಬೈ
*ನಮ್ಮ ತಂದೆ ತಾಯಿ ಹೆಮ್ಮೆ ಪಡುವಂತಹ ಕೆಲಸ ಮಾಡಬೇಕೆಂದಿರುವೆ. ಏನು ಮಾಡಲಿ?*
ಒಂದೇ ಒಂದು ದಿನ ಮೊಬೈಲ್ ಬಳಸದೆ ಅವರೊಡನಿದ್ದರೆ ಸಾಕೇ ಸಾಕು!
ಎಚ್.ಆರ್. ದೇಸಾಯಿ, ರಾಯಚೂರು

ಎಂ.ಎನ್. ಸೋಮಶೇಖರ್, ಮೈಸೂರು
*ಬ್ರಹ್ಮನಿಗೂ, ನಾರದರಿಗೂ ಏನು ವ್ಯತ್ಯಾಸ?*




ಇಲಾಖೆಗಳೇ ಬೇರೆ; ಬ್ರಹ್ಮನದು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ; ನಾರದನದು ವಾರ್ತಾ ಇಲಾಖೆ.

*ಕರೀ ಎಮ್ಮೆ ಬಿಳೀ ಹಾಲು ಕೊಡುವುದರ ಗುಟ್ಟೇನು?*
ಛೆ! ಉತ್ಪಾದನೆಯಲ್ಲಿ ಬಿಳಿ ಇಷ್ಟು ಕಪ್ಪಿಷ್ಟು ಎಂದು ತೋರಿಸಲು ಅದು ಎಮ್ಮೆಲ್ಲೆಯಲ್ಲ, ಪ್ರಾಮಾಣಿಕ ಎಮ್ಮೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಸೋಲುಗಳಲ್ಲಿ ನಿಮಗೆ ಯಾವ ರೀತಿಯ ಸೋಲು ಇಷ್ಟ ರಾಂ?*
ಆಮಸೋಲು! ಆ ಹಣ್ಣಿಗೆ ಖಾರ ಹಚ್ಚಿಕೊಂಡು ತಿಂದರೆ ರುಚಿಯೋ ರುಚಿ.

ಮುರಲೀಧರ ಕುಲಕರ್ಣಿ, ಬೀದರ್
*ದೇವರನ್ನು ದೀನಬಂಧು ಎನ್ನುತ್ತಾರೆ. ಆದರೆ ದೇವರು ಬಡವರನ್ನೇ ಹೆಚ್ಚು ಕಾಡುತ್ತಾನೆ. ಏಕೆ?*
ಸರಿಯೇ ಇದೆಯಲ್ಲ! ಬಂಧುವಿಗಿಂತ ಕಾಡುವ ಜನರಿಲ್ಲವೀ ಜಗದೊಳ್!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಆಸ್ಪತ್ರೆಗೆ ಹೋಗುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇರುವ ಕಾರಣ?*
ಸುಂದರವಾದ ನರ್ಸ್‌ಗಳು; ಅತಿ ಸುಂದರವಾದ ಸ್ವಾಗತಕಾರ್ತಿಯರು ಎಂದನೊಬ್ಬ ರಸಿಕ ಮುದುಕ.

ಡೈರಿ ವಿಶ್ವನಾಥ್, ಬೆಂಗಳೂರು
*ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗುವುದೆ?*
ಬಗ್ಗುವುದು. ಗಿಡಕ್ಕೆ ಹತ್ತಿಕೊಳ್ಳದ ಗೆದ್ದಲುಹುಳ ಮರಕ್ಕೆ ತಗುಲಿ ಟೊಳ್ಳಾಗುವುದರಿಂದ.

ವಿ. ಹಮೀದ್, ವಿಟ್ಲ
*ಅತ್ತೆ ಸೊಸೆ ಜಗಳ ನಿಲ್ಲಿಸಲು ಏನು ಮಾಡಬೇಕು?*
ಇಬ್ಬರ ವಾಟ್ಸಪ್‌ಗೂ ತಕ್ಕಂತಹ ಗಾಸಿಪ್ ಕಳಿಸಿಬಿಡಿ. ನಂತರ ಮೌನವೋ ಮೌನ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಗರ್ಭದಲ್ಲಿರುವ ಶಿಶು ತಾನು ಕೆಟ್ಟ ಪ್ರಪಂಚ ನೋಡುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ?*
ಚಾಕುಚೂರಿ ಸಂಸ್ಕೃತಿಯೇ ಗಟ್ಟಿ ಸಿಸೇರಿಯನ್ ಆಪರೇಶನ್.

ಮುರಲೀಧರ ಕುಲಕರ್ಣಿ, ಬೀದರ್
*ಮನುಷ್ಯನಿಗೆ ಹೊಟ್ಟೆಯೊಂದು ಇಲ್ಲದಿದ್ದರೆ ಏನಾಗುತ್ತಿತ್ತು?*
ಹೊಟ್ಟೆಕಿಚ್ಚೇ ಇಲ್ಲದೆ ಆಭರಣ, ಸೀರೆ ಅಂಗಡಿಗಳಿಗೆ ಸಿಕ್ಕಾಪಟ್ಟೆ ಲಾಸ್ ಆಗುತ್ತಿತ್ತು.

ಎಂ.ಆರ್. ಮುಕುಂದ, ಬೆಂಗಳೂರು
*ಹೆಂಡತಿಗೆ ಧರ್ಮಪತ್ನಿ ಎನ್ನುತ್ತಾರೆ. ಗಂಡನಿಗೆ...?*
ಗುಣಕ್ಕನುಗುಣವಾಗಿ ಧರ್ಮರಾಯ, ಯಮಧರ್ಮ, ದಮ್ಮುರಾಯ, ದಮ್ಮಯ್ಯರಾಯ.....
ಬೂಕನಕೆರೆ ವಿಜೇಂದ್ರ, ಮೈಸೂರು

## ಬಹುಮಾನಿತ ಪ್ರಶ್ನೆ

ಎಂ.ಬಿ. ರಂಗಯ್ಯಶೆಟ್ಟಿ, ಮೋಕ
*ಇಂದಿನವರ ದುರಾಡಳಿತಕ್ಕಿಂತ ಅಂದಿನ ಬ್ರಿಟಿಷರ ಆಳ್ವಿಕೆಯೇ ವಾಸಿ. ನೀವೇನಂತೀರಿ?*
ತಾಳ್ಮೆ ಇರಲಿ. ಕೊಂಚ ದಿನಗಳು ಮಾತ್ರ. ನಂತರ ದೇಶ ಮಾರಲ್ಪಟ್ಟು ಅವರೇ ಮತ್ತೆ ಬರುತ್ತಾರೆ!

*ಕಾರಣವೇ ಇಲ್ಲದೆ ಜಗಳವಾಡುವ ಗಂಡ ಹೆಂಡತಿಯರನ್ನು ಏನೆಂದು ಕರೆಯಬಹುದು?*
ಕರುಣಾನಿಧಿ ಜಯಲಲಿತಾ!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಗಂಡು ದೇವತೆಗಳಿಗಿಂತ ಹೆಣ್ಣು ದೇವತೆಗಳು ಹೆಚ್ಚಿರಲು ಕಾರಣವೇನು?*
ಆಗಿನ್ನೂ ಭ್ರೂಣಹತ್ಯೆ ಬಂದಿರಲಿಲ್ಲ.
ಪಿ.ಜೆ ರಾಘವೇಂದ್ರ, ಮೈಸೂರು

ಎಚ್.ಜಿ. ಜಗದೀಶ್, ಮೈಸೂರು
*ನಮ್ಮ ದೇಶದ ಅತ್ಯಂತ 'ಪವರ್‌ಫುಲ್' ದೇವರು ಯಾವುದು ರಾಂಜಿ?*



ದೇಶದ್ದಷ್ಟೇ ಅಲ್ಲ, ಪ್ರಪಂಚದ ಪವರ್‌ಫುಲ್ ದೇವರೂ ಅದೇ ಅನ್ನದೇವರ ಮುಂದೆ ಇನ್ನು ದೇವರು ಇಲ್ಲ!

*ದ್ರೌಪದಿಯ ವಸ್ತ್ರಾಪಹರಣ ಮಾಡಿದ ದುಶ್ಯಾಸನನಿಗೂ ಗೋಪಿಕಾಸ್ತ್ರೀಯರ ವಸ್ತ್ರಾಪಹರಣ ಮಾಡಿದ ಕೃಷ್ಣನಿಗೂ ಏನು ವ್ಯತ್ಯಾಸ?*
ದುಶ್ಯಾಸನ ಐಪಿಸಿ ಸೆಕ್ಷನ್ 354ರ ಅಡಿಯಲ್ಲಿ ಅಪರಾಧಿ; ಕೃಷ್ಣನ ವಿರುದ್ಧ ದೂರೇ ಇಲ್ಲದಿರುವುದರಿಂದ ನಿರಪರಾಧಿ.

ಎಸ್. ಸೋಮಶೇಖರ್, ಭದ್ರಾವತಿ
*ಹುಣಿಸೆಮರಕ್ಕೆ ಮುಪ್ಪು ಬಂದರೂ ಹುಣಿಸೆಹಣ್ಣಿಗೇಕೆ ಮುಪ್ಪು ಬರುವುದಿಲ್ಲ?*
ಸರಿಯೇ ಇದೆಯಲ್ಲ! ಮರ ಅಜ್ಜ. ಹಣ್ಣು ಆಗಾಗ್ಗೆ ಹುಟ್ಟುವ ಮೊಮ್ಮಕ್ಕಳು.

■ ರಾಮ್